ಕರ್ನಾಟಕ ವಿಧಾನಸಭೆ

ಗುರುವಾರ 8ನೇ ಆಗಸ್ಟ್ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್):- ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

1) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲುಗಳಿಗೆ ಸರಬರಾಜಾಗುವ ಆಹಾರ ಪದಾರ್ಥಗಳು.

349 (2375) ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ ನಿರ್ವಹಿಸುತ್ತಿರುವ ಹಾಸ್ಟೆಲುಗಳ ಸಂಖ್ಯೆ ಎಷ್ಟು? ಈ ಹಾಸ್ಟೆಲ್‌ಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಖಾಸಗಿ ಸಂಸ್ಥೆಗಳೆಷ್ಟು? ಸಹಕಾರ ಸಂಘಗಳು ಎಷ್ಟು?

ಆ) ಅಂತಹ ಹಾಸ್ಟೆಲ್‌ಗಳಿಗೆ ಸಹಕಾರ ಸಂಸ್ಥೆಗಳಿಂದಲೇ ಸರಬರಾಜು ಆಗಬೇಕೆಂದು ಸರ್ಕಾರಿ ಆಜ್ಞೆ ಇದ್ದು ಖಾಸಗಿಯವರಿಂದ ಸರಬರಾಜು ಮಾಡಲು ಕಾರಣವೇನು?

ಇ) ಈ ಬಗ್ಗೆ ಸರ್ಕಾರಿ ಆಜ್ಞೆ ಉಲ್ಲಂಘಿಸಿ ಖಾಸಗಿಯವರಿಂದ ಸರಬರಾಜನ್ನು ನಿಲ್ಲಿಸಲು ಮತ್ತು ಅಂತಹ ಷಾಮೀಲಾಗಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಎಂ. ಕೃಷ್ಣಾ ರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸಮಾಜ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ 1099 ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿ 12 ಖಾಸಗಿ ಸಂಸ್ಥೆಗಳಿಂದ ಮಾತ್ರ 57 ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ. ಉಳಿದ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಸಹಕಾರ ಸಂಘಗಳಿಂದ ಆಹಾರ ಪದಾರ್ಥಗಳನ್ನು ಖರೀದಿಸಲಾಗುತ್ತಿದೆ.

ಆ) ಸಹಕಾರ ಸಂಸ್ಥೆಗಳು, ಜನತಾ ಬಜಾರ್ ಸಂಸ್ಥೆಗಳು ಆಹಾರ ಸಾಮಗ್ರಿಗಳನ್ನು ಸಾಲದ ರೂಪದಲ್ಲಿ ನೀಡಲು ಮುಂದೆ ಬಂದಿಲ್ಲವಾದ್ದರಿಂದ ಹಾಗೂ ಸಕಾಲದಲ್ಲಿ ಸರಬರಾಜು ಮಾಡದೇ ಇದ್ದುದರಿಂದ ಸ್ಥಳೀಯ ಖಾಸಗಿಯವರಿಂದ ಟೆಂಡರ್ ಕರೆದು ಕಡಿಮೆ ದರ ನೀಡುವ ಖಾಸಗಿ ಸಂಸ್ಥೆಗಳ ಮೂಲಕ ಆಹಾರ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ.

ಇ) ಮೇಲೆ ವಿವರಿಸಿರುವಂತೆ ಸಹಕಾರ ಸಂಘಗಳು ಮತ್ತು ಜನತಾ ಬಜಾರ್ ಸಂಸ್ಥೆಗಳು ಸಾಲದ ರೂಪದಲ್ಲಿ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡದೇ ಇರುವುದರಿಂದ ಹಾಗೂ ಸಕಾಲದಲ್ಲಿ ಸರಬರಾಜು ಮಾಡುವುದಕ್ಕೆ ವಿಫಲರಾದ್ದರಿಂದ ವಿದ್ಯಾರ್ಥಿಗಳಿಗೆ ಊಟೋಪಚಾರಕ್ಕೆ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ಖಾಸಗಿ ಸಂಸ್ಥೆಗಳಿಂದ ಕೊಂಡುಕೊಳ್ಳಲಾಗಿದೆ. ಹೀಗೆ ಖಾಸಗಿಯವರಿಂದ ಖರೀದಿಸುವಾಗ ಟೆಂಡರ್ ಕರೆದು ನಿಯಮವನ್ನು ಅನುಸರಿಸಿ ಖರೀದಿಸಲಾಗಿದೆ. ಸಹಕಾರ ಸಂಘಗಳು ಮತ್ತು ಜನತಾ ಬಜಾರ್ ಸಂಸ್ಥೆಯವರು ಸಾಲದ ರೂಪದಲ್ಲಿ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಿದಲ್ಲಿ, ಅವರಿಗೇ ವಹಿಸಲಾಗುವುದು.

ಶ್ರೀ ಅಶ್ವಥ್‌ನಾರಾಯಣ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಿರುವ ಉತ್ತರದಲ್ಲಿ ಕೆಲವು ಸಹಕಾರ ಸಂಸ್ಥೆಗಳು ಮುಂದಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಆದರೆ ಇವರು ಹಾಸ್ಟೆಲ್‌ಗಳಿಂದ ಪಾವತಿ ಮಾಡತಕ್ಕದ್ದರಲ್ಲಿ ಖಾಸಗಿಯವರಿಗೆ ಬಹಳ ತ್ವರಿತವಾಗಿ ಹಣ ಕೊಡತಕ್ಕಂಥದ್ದು, ಬಹಳ ವಿಳಂಬವಾಗಿ ಹಣ ಕೊಡುತ್ತಿರುವುದರಿಂದ ಸಾಕಷ್ಟು ಸಹಕಾರಿ ಸಂಸ್ಥೆಗಳು ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಈ ಹಾಸ್ಟೆಲ್‌ಗಳಲ್ಲಿರತಕ್ಕಂಥ ಆಡಳಿತ ವರ್ಗದವರು ಸಹಕಾರಿ ಸಂಸ್ಥೆಗಳಿಗಿಂತ ಖಾಸಗೀ ಸಂಸ್ಥೆಯವರಿಗೆ ಕೊಟ್ಟರೆ ಮೇಲು ಎನ್ನುವ ದೃಷ್ಟಿಯಿಂದ ಅವರು ಧೋರಣೆಯನ್ನು ತಾಳಿರುವುದರಿಂದ ಕಡ್ಡಾಯ ಮಾಡಿ ಸಹಕಾರಿ ಸಂಘಗಳಿಂದಲೇ ಖರೀದಿ ಮಾಡಿಕೊಳ್ಳಲೇಬೇಕು ಎಂದು ಮಾಡಿದ್ದೇ ಆದರೆ ಎಲ್ಲಾ ಕಡೆ ಕೊಡುತ್ತಾರೆ. ಆದರ ಬಗ್ಗೆ ಸರ್ಕಾರದ ಕಡೆಯಿಂದ ನಿರ್ದಿಷ್ಟವಾದ ಆಜ್ಞೆ ಇದ್ದರೂ ಕೂಡ ಉಲ್ಲಂಘನೆ ಮಾಡತಕ್ಕವರಿಗೆ ನೀವು ಏನು ಕ್ರಮವನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಇಡೀ ಕರ್ನಾಟಕದಲ್ಲಿ ಎಲ್ಲೆಲ್ಲಿ ಸಹಕಾರ ಸಂಘಗಳು ಮುಂದೆ ಬಂದಿವೆಯೋ ಅಲ್ಲೆಲ್ಲಾ ಸಹಕಾರಿ ಸಂಘಗಳಿಗೇ ಪದಾರ್ಥಗಳನ್ನು ಕೊಡುತ್ತಿದ್ದೇವೆ. ಅಧಿಕಾರ ವಿಕೇಂದ್ರೀಕರಣ ಬಂದಮೇಲೆ ಇದನ್ನು ಜಿಲ್ಲಾ ಪಂಚಾಯತಿ ಮುಖಾಂತರ ನಡೆಸಲಾಗುತ್ತಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದು, ಎಲ್ಲಿ ಸಹಕಾರ ಸಂಘಗಳು ಮುಂದಕ್ಕೆ ಬಂದಿಲ್ಲವೋ ಅಂಥ 12 ಕಡೆಗಳಲ್ಲಿ ಖಾಸಗೀ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಎಲ್ಲಿ ಸಹಕಾರ ಸಂಘಗಳು ಮುಂದಕ್ಕೆ ಬಂದಿವೆಯೋ ಅಂಥ ಕಡೆ ಅವುಗಳಿಗೆ ಕೊಟ್ಟಿದ್ದೇವೆ. ಆದುದರಿಂದ ಈಗಾಗಲೇ ಖಾಸಗೀ ಸಂಸ್ಥೆಗಳಿಗೆ ಕೊಟ್ಟಿರುವ ಜಾಗದಲ್ಲೂ ನಮ್ಮ ಸಹಕಾರಿ ಸಂಸ್ಥೆಗಳು ಮುಂದೆ ಬಂದರೆ ಅಲ್ಲೂ ಕೂಡ ಇವುಗಳಿಗೇ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಅಶ್ವಥ್‌ನಾರಾಯಣ್ ರೆಡ್ಡಿ:- ಎಲ್ಲಿ ಸಹಕಾರ ಸಂಘಗಳು ಮುಂದಕ್ಕೆ ಬಂದಿಲ್ಲ ಎಂಬ ಬಗ್ಗೆ ತಮಗೇನಾದರೂ ಲಿಖಿತವಾಗಿ ಕೊಟ್ಟಿದ್ದಾರೆಯೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಸದಸ್ಯರು, ಈ ಮೊದಲೇ ಎಲ್ಲಿ ಎನ್ನುವ ಪ್ರಶ್ನೆಯನ್ನು ಕೇಳಿ-

ದ್ದರೆ ಅದರ ಬಗ್ಗೆ ವಿವರಗಳನ್ನು ಕೊಡಬಹುದಾಗಿತ್ತು. 12 ಖಾಸಗೀ ಸಂಸ್ಥೆಗಳು 57 ಹಾಸ್ಟೆಲ್‌ಗಳಿಗೆ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದಾರೆ. ನಾವು ಒಟ್ಟು 1099 ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದೇವೆ. ಎಲ್ಲವನ್ನೂ ಕೂಡ ಸಹಕಾರಿ ಸಂಸ್ಥೆಗಳಿಗೆ ಕೊಟ್ಟಿದ್ದೇವೆ, ಆದರೆ ಕೇವಲ 12 ಕಡೆ ಮಾತ್ರ ಖಾಸಗಿ ಸಂಸ್ಥೆ- ಗಳಿಗೆ ಕೊಟ್ಟಿರುವುದು. ಇಲ್ಲಿಯೂ ಕೂಡ ಸಹಕಾರಿ ಸಂಸ್ಥೆಗಳೇ ಮುಂದೆ ಬಂದರೆ ಅವರಿಗೇ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಅಶ್ವಥ್‌ನಾರಾಯಣ್ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಹಾಸ್ಟೆಲ್‌ಗಳಿಗೆ ಆಹಾರ ಪದಾರ್ಥ-ಗಳನ್ನು ಕೊಳ್ಳುವಾಗ ಕೆಲವು ಸಹಕಾರ ಸಂಘಗಳಿಗೆ ಕೊಟ್ಟಿದ್ದೇವೆ ಎಂದು ತಿಳಿಸಿದ್ದಾರೆ, ಮತ್ತು ಸಹಕಾರ ಸಂಘಗಳಿಂದಲೇ ಆಹಾರ ಪದಾರ್ಥಗಳನ್ನು ಕೊಳ್ಳುತ್ತೇವೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ನಾಮಕಾವಸ್ಥೆಗಾಗಿ ಸಹಕಾರ ಸಂಘಗಳ ಹೆಸರನ್ನು ಇಟ್ಟುಕೊಂಡು ಖಾಸಗಿಯವರೇ ಈ ದಂಧೆಯನ್ನು ನಡೆಸುತ್ತಿದ್ದಾರೆ. ತಾವು ದಯಮಾಡಿ ತೆಗೆಸಿನೋಡಿ, ನಮ್ಮ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಧಾರಣೆಗೂ ಮತ್ತು ಇವರು ಪರ್ಚೇಸ್ ಮಾಡಿ ಬಿಲ್ ಹಾಕಿರತಕ್ಕಂಥ ಧಾರಣೆಗೂ ಬಹಳ ಅಜ-ಗಜಾಂತರವಾಗಿರತಕ್ಕಂಥ ವ್ಯತ್ಯಾಸವಿದೆ. ಅಲ್ಲಿರತಕ್ಕಂಥ ವಿದ್ಯಾರ್ಥಿನಿಲಯದ ಬಡ ಮಕ್ಕಳು ಹಸಿವಿ-ನಿಂದ ನರಳುತ್ತಿದ್ದಾರೆ. ಕೊಡತಕ್ಕಂಥ ಸರ್ಕಾರದ ಹಣ ಸಾಕಾಗುಪ್ರುದಿಲ್ಲ. ಇದಲ್ಲದೇ ಮಧ್ಯವರ್ತಿ-ಗಳೂ ಹಣವನ್ನು ಹೊಡೆದು ತಿನ್ನುತ್ತಿದ್ದಾರೆ. ದಯಮಾಡಿ ತಾವು ಆರ್.ಎಮ್.ಸಿ.ಯ ಧಾರಣೆಯನ್ನು ಮತ್ತು ಈ ಹಾಸ್ಟೆಲ್‌ಗಳವರು ಪರ್ಚೇಸ್ ಮಾಡಿದ್ದೇವೆಂದು ತೋರಿಸುವ ಬಿಲ್‌ಗಳಲ್ಲಿರುವ ಧಾರಣೆ-ಯನ್ನು ತಾವು ಪರಿಶೀಲನೆ ಮಾಡಿ ನೋಡುತ್ತೀರಾ? ಇದರಲ್ಲಿ ಸಿಗುವ ವ್ಯತ್ಯಾಸದ ಮೊತ್ತ ಏನಿರುತ್ತದೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲು ಮಾಡಲು ತಾವು ಏನಾದರೂ ಕ್ರಮಗಳನ್ನು ಕೈ-ಗೊಳ್ಳುತ್ತೀರಾ? ಈ ಮೂಲಕ ಬಡ ಮಕ್ಕಳು ಯಾರು ಹೊಟ್ಟೆ ಹಸಿವಿನಿಂದ ನರಳುತ್ತಿದ್ದಾರೆ ಅವರಿಗೆ ಹೊಟ್ಟೆ ತುಂಬ ಆಹಾರವನ್ನು ಕೊಡಲು ಕ್ರಮಗಳನ್ನು ತಮ್ಮ ಕಡೆಯಿಂದ ತೆಗೆದುಕೊಳ್ಳುವುದಕ್ಕೆ ಆಗು-ತ್ತದೆಯೆ?

ಅಧ್ಯಕ್ಷರು:- ಇದಕ್ಕೆ ಉತ್ತರವನ್ನು ನಾನೇ ಹೇಳುತ್ತೇನೆ. ಸಹಕಾರ ಸಂಘವನ್ನು ನಡೆಸುವವರು ನಾವು ಅಂದರೆ ಸಾರ್ವಜನಿಕರು. ಇಲ್ಲಿ ನಾವೇ ಇಂಥ ದಗಾಕೋರರ ಕೆಲಸಕ್ಕೆ ಇಳಿದರೆ ಇನ್ನು ಇದರ ಬಗ್ಗೆ ವಿಚಾರಣೆ ಮಾಡುವವರು ಯಾರು? ಶಿಕ್ಷೆ ಕೊಡುವವರು ಯಾರು? ಸುಳ್ಳು ಬಿಲ್ ಕೊಡು-ವುದಕ್ಕೆ, ಕಳ್ಳ ಬಿಲ್ ಕೊಡುವುದಕ್ಕೆ ಸಹಕಾರ ಸಂಘ ನಡೆಸುವ ನಾವುಗಳೇ ತಯಾರಾಗಿಬಿಟ್ಟರೆ, ಮಂತ್ರಿ ಏನು ಮಾಡುವುದು, ಅಧಿಕಾರಿಗಳು ಏನು ಮಾಡುವುದು, ಏಕೆಂದರೆ ಸಹಕಾರ ಸಂಘಗಳನ್ನು ಅಧಿ-ಕಾರಿಗಳು ನಡೆಸುವುದಿಲ್ಲ, ಅದನ್ನು ನಾವೇ ನಡೆಸುವುದು.

ಶ್ರೀ ಅಶ್ವಥ್‌ನಾರಾಯಣ್ ರೆಡ್ಡಿ:- ಅಧ್ಯಕ್ಷರೇ, ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಇದರ ಬಗ್ಗೆ ನನ್ನ ಕ್ಷೇತ್ರದಲ್ಲಿಯೇ ನಡೆದಿರುವಂಥ ಒಂದು ಘಟನೆಯನ್ನು ಉದಾಹರಣೆಯನ್ನಾಗಿ

ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿರುವ ತಾಲ್ಲೂಕು ಸೊಸೈಟಿ ಬಹಳ ಸದೃಢವಾಗಿ ನಡೆಯುತ್ತಿದೆ. ಕೊಟೇಶನ್ ಕೊಟ್ಟರೆ ಇವರು ಆರ್ಡರ್ ಕೊಡಲಿಲ್ಲ. ಶಿವಮೊಗ್ಗದಲ್ಲಿ ಕೆಲವರು ಕೇವಲ ಬ್ಯಾಗ್‌ಗಳಲ್ಲಿ ನಕಲಿ ಪ್ಯಾಡ್, ಸೀಲುಗಳನ್ನು ಹೊಂದಿದ್ದು ನಾಮಕಾವಸ್ಥೆ ಸೊಸೈಟಿಯ ಹೆಸರನ್ನೊಳಗೊಂಡ ಸೀಲನ್ನು ಇಟ್ಟುಕೊಂಡಿರುವ ಸೊಸೈಟಿಗಳು ಅಲ್ಲಿವೆ. ಇದರಲ್ಲಿ ವ್ಯವಸ್ಥಿತವಾಗಿ ಅಧಿಕಾರಿಗಳೂ ಕೂಡ ಷಾಮೀಲಾಗಿದ್ದುಕೊಂಡು ಅಂಥ ಒಂದು ಸೊಸೈಟಿಗಳಿಗೆ ಆರ್ಡರ್ ಕೊಟ್ಟು ಆಹಾರ ಧಾನ್ಯಗಳನ್ನು ಪೂರೈಸುತ್ತಿದ್ದಾರೆ. ಅಲ್ಲಿ ಬೋಗಸ್ ಸೊಸೈಟಿಗಳು ಇವೆ. ಈ ರೀತಿಯ ದಂಧೆಯನ್ನು ಮಾಡುವುದಕ್ಕೋಸ್ಕರವೇ ಜನ್ಮ ತಾಳಿರುವ ಸಹಕಾರ ಸಂಸ್ಥೆಗಳಿವೆ. ಇಂಥವಕ್ಕೆ ಆರ್ಡರ್ ಕೊಟ್ಟಿದ್ದಾರೆ ಎಂದು ನಾನು ಹೇಳುತ್ತಿರುವುದು.

ಅಧ್ಯಕ್ಷರು:- ಮಂತ್ರಿಗಳು ಇವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳಲ್ಲಿ ಮುಂದೆ ಬಂದಿರತಕ್ಕಂಥವುಗಳು ಎಂದರೆ ಜನತಾ ಬಜಾರ್, ಡಿ.ಎ.ಪಿ.ಸಿ.ಎಂ.ಸಿ.ಗಳಾಗಿವೆ. ಜನತಾ ಬಜಾರ್ ಇರುವ ಕಡೆಯಲ್ಲೆಲ್ಲಾ ಇವಕ್ಕೇ ಕೊಡುವಂಥ ವ್ಯವಸ್ಥೆ, ಡಿ.ಎ.ಪಿ.ಸಿ.ಎಂ.ಸಿ. ಇರತಕ್ಕಂಥ ಕಡೆಯಲ್ಲೆಲ್ಲಾ ಇವರಿಗೇ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ತಾವು ಹೇಳಿದ ಹಾಗೆ ಖಾಸಗಿಯವರು ಬೋಗಸ್ ಸೊಸೈಟಿ ಏನಾದರೂ ಮಾಡುತ್ತಿದ್ದರೆ, ಅಂಥವುಗಳ ಬಗ್ಗೆ ಸಹಕಾರ ಮಂತ್ರಿಗಳಿಗೆ ನೀವು ತಿಳಿಸಿದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು. ವಿಚಾರಣೆ ಮಾಡಿಯಾದ ಮೇಲೆ ಬೋಗಸ್ ಎಂದು ತೀರ್ಮಾನವಾದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಸೊಸೈಟಿಗಳು ಎಂದು ಹೇಳತಕ್ಕಂಥದ್ದರಲ್ಲಿ ಎರಡು ವಿಧಗಳಿವೆ. ಖಾಸಗೀ ಸೊಸೈಟಿಗಳು ಎನ್ನುವುದರಲ್ಲಿ ಕೆಲವರು ವಾಲಂಟರಿಯಾಗಿ, ಅವರ ಮನೆಯವರನ್ನೇ ಕೆಲವು ಜನರನ್ನು ಸೇರಿಸಿಕೊಂಡು ಒಂದು ಸೊಸೈಟಿ ಪ್ರಾರಂಭ ಮಾಡುವುದಕ್ಕಾಗಿ ಅರ್ಜಿಯನ್ನು ಹಾಕುತ್ತಾರೆ. ಅವರಿಗೂ ಮತ್ತು ಇವರಿಗೂ ದುರುಪಯೋಗ ಮಾಡಿಕೊಳ್ಳುವುದರಲ್ಲಿ ವ್ಯತ್ಯಾಸವೇನೂ ಇಲ್ಲ. ಹೆಸರಿಗೆ ಸೊಸೈಟಿ ಅಷ್ಟೆ, ಆದರೆ ಅವರ ಕುಟುಂಬದವರನ್ನು ಮಾತ್ರ ಸೇರಿಸಿಕೊಂಡು, ಒಂದು ಕಮಿಟಿ ಮಾಡಿಕೊಂಡು ಅದರ ಮೂಲಕ ಅರ್ಜಿಯನ್ನು ಹಾಕಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡಿ, ಇಡೀ ಸವಲತ್ತನ್ನು ದುರುಪಯೋಗ ಮಾಡಿಕೊಳ್ಳತಕ್ಕಂಥ ವ್ಯವಸ್ಥೆ ಇದೆ. ಆದ್ದರಿಂದ ಈ ಸೊಸೈಟಿಗಳು ಎಂದು ಹೇಳಿದ ತಕ್ಷಣ ಇವೆರಡನ್ನೂ ಮಿಕ್ಸ್ ಮಾಡಬಾರದು. ಇವರು ಏನು ಇಂಡಿವಿಜುಯಲ್ಸ್ ಹೇಗೆ ಮಾಡುತ್ತಿದ್ದಾರೆ, ಇವರೂ ಕೂಡ ಹಾಗೆಯೇ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದನ್ನೂ ಕೂಡ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘದ ಕಾಯಿದೆಯನ್ವಯ ಯಾವ ಖಾಸಗೀ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಅಶ್ವಥ್‌ನಾರಾಯಣ್ ರೆಡ್ಡಿ:- ಅಧ್ಯಕ್ಷರೇ, ಎಲ್ಲೆಲ್ಲಿ ಲ್ಯಾಂಬ್ ಸೊಸೈಟಿಗಳು ಇವೆ ಮತ್ತು ಮಹಿಳಾ ಸೊಸೈಟಿಗಳು ಇವೆ ಅಂಥ ಜಾಗಗಳಲ್ಲಿ ಲ್ಯಾಂಬ್ ಸೊಸೈಟಿಗಳಿಗೆ ಮತ್ತು ಮಹಿಳಾ ಸೊಸೈಟಿಗಳಿಗೆ ಆದ್ಯತೆಯನ್ನು ಕೊಡುವಂಥದ್ದರ ಬಗ್ಗೆ ಸರ್ಕಾರಕ್ಕೆ ಏನಾದರೂ ಯೋಚನೆ ಇದೆಯೇ?

ಅಧ್ಯಕ್ಷರು:- ಒಳ್ಳೆಯ ಪ್ರಶ್ನೆಯಾಗಿದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಅಧ್ಯಕ್ಷರೇ, ಆಹಾರ ಸರಬರಾಜಿಗೆ ಸಂಬಂಧಪಟ್ಟಂತೆ [illegible]ಯನ್ನು ಕೊಟ್ಟು ಪರಿಶೀಲನೆಯನ್ನು ಮಾಡುತ್ತೇನೆ.

ವಿಷಯ:- ಬಿಜಾಪುರಕ್ಕೆ ಕುಡಿಯುವ ನೀರು ಪೂರೈಕೆ.

347 (1090) **ಶ್ರೀ ಬಸವನಗೌಡ ರಾ. ಪಾಟೀಲ (ವಿಜಾಪುರ):-** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರ ಕುಡಿಯುವ ನೀರಿನ ಎರಡನೆಯ ಹಂತದ ಯೋಜನೆ ಯಾವ ಹಂತದಲ್ಲಿದೆ, ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಎರಡನೆಯ ಹಂತದ ಯೋಜನೆ ಪೂರ್ತಿಯಾಗಲು ಇನ್ನೂ ಎಷ್ಟು ಹಣದ ಅವಶ್ಯಕತೆ ಇದೆ. ಈ ಹಣದ ಸಲುವಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಈ ಯೋಜನೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಜಾಕ್‌ವೆಲ್ 1290 ಮೀ. ಉದ್ದದ ಜೋಡಣೆ ಕೊಳವೆ ಮಾರ್ಗ, ಮೂರು ಮೇಲ್ಮಟ್ಟದ ಜಲಸಂಗ್ರಹಾಲಯಗಳು, ಸಂಪು ಮತ್ತು ಪಂಪಿನ ಮನೆ (ಕೆ.ಎಸ್.ಆರ್.ಟಿ.ಸಿ. ವರ್ಕ್‌ಶಾಪ್ ಹತ್ತಿರ) ಕೆಲಸಗಳು ಮುಗಿದಿದೆ. ಉಳಿದ ಕೆಲಸಗಳು ಒಳ್ಳೆಯ ಪ್ರಗತಿಯಲ್ಲಿವೆ. ಈ ಯೋಜನೆಗಾಗಿ ಇದುವರೆವಿಗೂ ರೂ. 2461.05 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಯೋಜನೆ ಪೂರ್ತಿಯಾಗಲು ರೂ. 1100.00 ಲಕ್ಷಗಳ ಅವಶ್ಯಕತೆ ಇದೆ. 1996-97ರ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗಾಗಿ ರೂ. 800 ಲಕ್ಷಗಳನ್ನು ಕಾದಿರಿಸಲಾಗಿದೆ. ಬಾಕಿ ಹಣವನ್ನು ಸಂಬಂಧಪಟ್ಟ ಮೂಲಗಳಿಂದ ಕ್ರೋಢೀಕರಿಸಲಾಗುವುದು.

ಇ) ಯೋಜನೆಯನ್ನು 90-91ರಲ್ಲಿ ಪ್ರಾರಂಭಿಸಲಾಗಿದ್ದು, ಈಗ ಒಳ್ಳೆಯ ಪ್ರಗತಿಯಲ್ಲಿದೆ. ಈ ಯೋಜನೆಯನ್ನು 1997ರ ಮಾರ್ಚ್ ತಿಂಗಳಲ್ಲಿ ಚಾಲೂ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಬಸವನಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಎರಡನೇ ಹಂತದ ಯೋಜನೆಗೆ 800 ಲಕ್ಷ ರೂ. ಗಳನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಇದಕ್ಕಾಗಿ ವಿಜಾಪುರ ಜಿಲ್ಲೆಯ ಜನತೆಯ ಪರವಾಗಿ ಮಂತ್ರಿಗಳಿಗೆ ಅಭಿನಂದಿಸುತ್ತಾ ಇನ್ನೂ ಉಳಿದ 3 ಕೋಟಿ ರೂ.ಗಳಿಗಾಗಿ ವಿವಿಧ ಮೂಲಗಳಿಂದ ಸಂಗ್ರಹಿಸಲಾಗುವುದು